**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 640 |
| ಉತ್ತರಿಸುವ ದಿನಾಂಕ | 12-03-2025 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ. ಪ್ರತಾಪ್ ಸಿಂಹ ನಾಯಕ್ (ವಿಧಾನಸಭಾ ಕ್ಷೇತ್ರ) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಆಸ್ತಿ ನೋಂದಣಿ ಮಾಡಲು ಕಂದಾಯ ಇಲಾಖೆ ನೀಡುವ ಋಣಭಾರ ಪ್ರಮಾಣ ಪತ್ರ (ಇ.ಸಿ) ಸಕಾಲದಲ್ಲಿ ಹಾಗೂ ತ್ವರಿತವಾಗಿ ಸಿಗದೆ ಸಾರ್ವಜನಿಕರು ತಮ್ಮ ನೋಂದಣಿ ವ್ಯವಹಾರಗಳನ್ನು ಮಾಡಲು ಸಾಕಷ್ಟು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | Distributed Denial of Service (DDoS) Attack ನಿಂದಾಗಿ ಕಾವೇರಿ-2.0 ತಂತ್ರಾಂಶದಲ್ಲಿ ಸರ್ವರ್ ಸಮಸ್ಯೆ ಉಂಟಾಗಿ ದಿನಾಂಕ: 06-01-2025 ರಿಂದ 05-02-2025 ರವರೆಗೆ ಸಾರ್ವಜನಿಕರಿಗೆ ಋಣಭಾರ ಪ್ರಮಾಣ ಪತ್ರ (ಇ.ಸಿ) ಸಕಾಲದಲ್ಲಿ ಸಿಗದೆ ತೊಂದರೆಯಾಗಿದ್ದು, ತದನಂತರ ಈ ಸಮಸ್ಯೆಯನ್ನು ಸೆಂಟರ್ ಫಾರ್ ಸ್ಮಾರ್ಟ್ ಗೌರ್ನೆನ್ಸ್ ಸಂಸ್ಥೆಯು ಸಮಸ್ಯೆಯನ್ನು ಪರಿಹರಿಸಿದ್ದು, ಈ ಸಂಬಂಧ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್ ದಾಖಲಿಸಲಾಗಿರುತ್ತದೆ. ದಿನಾಂಕ: 06-02-2025 ರಿಂದ ಋಣಭಾರ ಪ್ರಮಾಣ ಪತ್ರಗಳನ್ನು ವಿಳಂಬವಿಲ್ಲದೇ ಸಾರ್ವಜನಿಕರಿಗೆ ನೀಡಲಾಗಿರುತ್ತದೆ.<br>ಸದರಿ ಸಮಸ್ಯೆಯನ್ನು ಈಗಾಗಲೇ ಪರಿಹರಿಸಲಾಗಿದ್ದು, ಸಿಎಸ್‌ಜಿಯು ಕಾಲ-ಕಾಲಕ್ಕೆ ತಂತ್ರಾಂಶವನ್ನು ಉನ್ನತೀಕರಿಸುತ್ತಿದ್ದು, ಪ್ರಸ್ತುತ ಯಾವುದೇ ಸಮಸ್ಯೆ ಇರುವುದಿಲ್ಲ. |
| ಆ | ಬಂದಿದ್ದಲ್ಲಿ, ಈ ಹಿಂದೆ ಕೇವಲ ಮೂರು ದಿನಗಳಲ್ಲಿ ಸಿಗುತ್ತಿದ್ದ ಋಣಭಾರ ಪ್ರಮಾಣ ಪತ್ರ (ಇ.ಸಿ) ಈಗ 15 ದಿನಗಳಾದರೂ ಸಿಗುತ್ತಿಲ್ಲದಿರುವ ಈ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಇದುವರೆಗೆ ಯಾವೆಲ್ಲಾ ಕ್ರಮಗಳನ್ನು ಕೈಗೊಂಡಿದೆ; | |
| ಇ | ಯಾವ ಕಾಲಮಿತಿಯೊಳಗೆ, ಈ ಸಮಸ್ಯೆಯನ್ನು ಪೂರ್ಣವಾಗಿ ಪರಿಹರಿಸಿ, ಸಾರ್ವಜನಿಕರು ನೋಂದಣಿ ವ್ಯವಹಾರಗಳನ್ನು ಯಾವುದೇ ಸಮಸ್ಯೆ ಮತ್ತು ವಿಳಂಬವಿಲ್ಲದೆ ಮಾಡುವಂತಾಗಲು ಕ್ರಮವಹಿಸಲಾಗುವುದು? | |

ಕಡತ ಸಂಖ್ಯೆ: ಕಂಇ/77/ಎಂಎನ್‌ಎಸ್‌ಎ/2025

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು